ಕರ್ನಾಟಕ ವಿಧಾನ ಪರಿಷತ್ತು

3/3/2020

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	76
ಸದಸ್ಯರ ಹೆಸರು	:	ಶ್ರೀ ಯು.ಬಿ ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	03.03.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಮಹಾನಗರಪಾಲಿಕೆ/ ನಗರ ಪಾಲಿಕೆ ಸಂಧಿಸಿದಂತೆ ಸಾರ್ವಜನಿಕರಿಗೆ ಅವಶ್ಯಕವಿರುವ ಸೇವೆಗಳಾದ ಭೂ ನಕ್ಷೆ ಮಂಜೂರಾತಿ, ಕಟ್ಟಡ ನಿರ್ಮಾಣ ಮಂಜೂರಾತಿ, ವಿದ್ಯುತ್ ಸಂಪರ್ಕ ತೆರಿಗೆ ಪಾವತಿ ಎಲ್ಲಾ ಸೌಲಭ್ಯಗಳು ಒಂದೇ ಕಿಂಡಿಯಲ್ಲಿ ದೊರೆಯುವಂತೆ ಮಾಡಲು ಸರ್ಕಾರದ ಮುಂದಿರುವ ಯೋಜನೆಗಳಾವುವು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ವಿಶ್ವ ಬ್ಯಾಂಕಿನ ಕೇಂದ್ರ ಸರ್ಕಾರದ ಉದ್ಯಮ ಸ್ನೇಹಿ ಸುಧಾರಣೆ (Ease of Doing Business Reforms) ಅಡಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿಯನ್ನು ಆನ್ ಲೈನ್ ಮುಖಾಂತರವೇ ನೀಡಲು ಯೋಜನೆಯನ್ನು ತಯಾರಿಸಲಾಗಿದೆ. ರಾಜ್ಯದ ಇತರೇ 10 ಮಹಾನಗರಪಾಲಿಕೆಗಳು ಸೇರಿದಂತೆ 276 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಬಂಧಿಸಿದಂತೆ, • Land and Building Plan Approval System (LBPAS) ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಕಟ್ಟಡ ಪರವಾನಿಗೆ, ಭೂನಕ್ಷೆ ಮಂಜೂರಾತಿ ಮತ್ತು ಭೂ ಉಪಯೋಗ ಪರಿವರ್ತನೆ ಮಾದರಿಗಳಿದ್ದು, ಪ್ರಸ್ತುತ ಕಟ್ಟಡ ಪರವಾನಗಿ ಮಂಜೂರಾತಿಯನ್ನು 217 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಆನ್ ಲೈನ್ ಗೊಳಿಸಲಾಗಿದೆ. • Land and Building Plan Approval System ತಂತ್ರಾಂಶದ ಕಟ್ಟಡ ಪರವಾನಿಗೆ ಮಂಜೂರಾತಿಯನ್ನು ಅನುಷ್ಠಾನಗೊಳಿಸಿದ್ದು, ನಾಗರೀಕರು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಜಾಲತಾಣಕ್ಕೆ ಭೇಟಿ ನೀಡಿ (LBPAS (Nirman-2) ತಂತ್ರಾಂಶದ ಮೂಲಕ ಕಟ್ಟಡ ನಕ್ಷೆಯೊಂದಿಗೆ ಕಟ್ಟಡ ಪರವಾನಿಗೆ ಕೋರಿ ಅರ್ಜಿ ಸಲ್ಲಿಸಬೇಕು. • ನಾಗರೀಕರು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಜಾಲತಾಣಕ್ಕೆ ಭೇಟಿ ನೀಡಿ ಆಸ್ತಿ ತೆರಿಗ ಲೆಕ್ಕಾಚಾರ ತಂತ್ರಾಂಶದಲ್ಲಿ ಆಸ್ತಿಗಳ ಮಾಹಿತಿಯನ್ನು ದಾಖಲಿಸಿ, ಆನ್ ಲೈನ್ ಮೂಲಕ ತೆರಿಗೆ ಪಾವತಿಸಬಹುದು. ವಿದ್ಯುತ್ ಸಂಪರ್ಕ ತೆರಿಗೆ ಪಾವತಿ ಬಗ್ಗೆ ವಿದ್ಯುತ್ ವಿತರಣಾ ಸಂಸ್ಥೆಗಳು ಕ್ರಮವಹಿಸಬೇಕಿದೆ.

ಆ)	ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ Ease of Doing Business Reforms ಅನ್ನು ಜಾರಿಗೆ ತರಲು ಕ್ರಮಕೈಗೊಳ್ಳಲಾಗಿದೆ. • ಇತರೇ 10 ಮಹಾನಗರ ಪಾಲಿಕೆಗಳು ಸೇರಿದಂತೆ 276 ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮೇಲಿನ (ಅ) ಭಾಗದಲ್ಲಿ ವಿವರಿಸಿರುವಂತೆ ಕ್ರಮವಹಿಸಲಾಗಿದೆ.

ನಅಇ 39 ಎಂಎನ್‌ಇ 2020(ಇ).

2/3/2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು